2) ರೂ 9 28 ಲಕ್ಷಗಳ ಅಂದಾಜು ವೆಚ್ಚದಲ್ಲಿ ಸಂಪರ್ಕ ರಸ್ತೆ ಅಭಿವೃದ್ಧಿ

3) ರೂ 2 74 ಲಕ್ಷಗಳ ಅಂದಾಜು ವೆಚ್ಚದಲ್ಲಿ ಭೈರವೇಶ್ವರ ದೇವಾಲಯದ ಸುತ್ತ ಕಂಪೌಂಡ್ ನಿರ್ಮಾಣ ಹಾಗೂ ಲ್ಯಾಂಡ್‌ಸ್ಕೇಪಿಂಗ್

4) ರೂ 5 37 ಲಕ್ಷ ರೂ ವೆಚ್ಚದಲ್ಲಿ ಭೈರವೇಶ್ವರ ದೇವಾಲಯದಿಂದ ಗೋಪಾಲಕೃಷ್ಣ ದೇವಾಲಯದ ವರೆಗಿರುವ 298 ಮೆಟ್ಟಲುಗಳ ದುರಸ್ತಿ ಕಾಮಗಾರಿ ಹಾಗೂ ರೂ 2 15 ಲಕ್ಷ ವೆಚ್ಚದಲ್ಲಿ ಶೌಚಾಲಯ ಹಾಗೂ ಸ್ನಾನ ಗೃಹಗಳ ನಿರ್ಮಾಣ

5) ರೂ 2 74 ಲಕ್ಷ ರೂ ಅಂದಾಜು ವೆಚ್ಚದಲ್ಲಿ ಭೈರವೇಶ್ವರ ದೇವಾಲಯದ ಸುತ್ತ ಕಂಪೌಂಡ್ ನಿರ್ಮಾಣ ಹಾಗೂ ಲ್ಯಾಂಡ್ ಸ್ಕೇಪಿಂಗ್

6) ರೂ 5 37 ಲಕ್ಷ ರೂ ವೆಚ್ಚದಲ್ಲಿ ಭೈರವೇಶ್ವರ ದೇವಾಲಯದಿಂದ ಗೋಪಾಲಕೃಷ್ಣ ದೇವಾಲಯದ ವರೆಗಿರುವ 298 ಮೆಟ್ಟಲುಗಳ ದುರಸ್ತಿ ಕಾಮಗಾರಿ ಹಾಗೂ ರೂ 2 15 ಲಕ್ಷ ವೆಚ್ಚದಲ್ಲಿ ಶೌಚಾಲಯ ಹಾಗೂ ಸ್ನಾನ ಗೃಹಗಳ ನಿರ್ಮಾಣ

7) ರೂ 8 00 ಲಕ್ಷಗಳ ವೆಚ್ಚದಲ್ಲಿ ಮಾಹಿತಿ ಕೇಂದ್ರ, ಸೆಕ್ಯೂರಿಟಿ ಗೇಟ್, ಪ್ಯಾರಾಗೋಲಾಗಳ ದುರಸ್ತಿ

8) ಹಾಲಿ ಇರುವ ಮೆಟ್ಟಿಲುಗಳ ರಿಪೇರಿ ಹಾಗೂ ರೈಲಿಂಗ್ ಅಳವಡಿಸಲು ರೂ 2 50 ಲಕ್ಷಗಳು

9) ರೂ 4 00 ಲಕ್ಷಗಳ ವೆಚ್ಚದಲ್ಲಿ ಗಣಪತಿ ದೇವಸ್ಥಾನದ ಅಭಿವೃದ್ಧಿ ಹಾಗೂ ಶೆಡ್ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ

1478 (1955) ಶ್ರೀ ಮೋಹನ್ ಪಿ ಸಿ (ಚಿಕ್ಕಪೇಟೆ) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನೂತನವಾಗಿ ಸೇರ್ಪಡೆ ಗೊಂಡಿರುವ 5 ವಲಯಗಳಲ್ಲಿ ಕಟ್ಟಡಗಳ ಸಮೀಕ್ಷಾ ಕಾರ್ಯ ಆರಂಭಿಸಲಾಗಿದೆಯೇ,

ಆ) ಈ ಸಮೀಕ್ಷಾ ಕಾರ್ಯದ ಉದ್ದೇಶವೇನು,

ಇ) ಸಮೀಕ್ಷಾ ಕಾರ್ಯದಿಂದ ಪಾಲಿಕೆಗೆ ಬರುವ ಆದಾಯ ಹೆಚ್ಚಳವಾಗುವುದು ಎಷ್ಟು,

ಈ) ಸಮೀಕ್ಷಾ ಕಾರ್ಯ ನಡೆಸಲು ಪ್ರತ್ಯೇಕ ತಂಡಗಳನ್ನು ರಚಿಸಲಾಗಿದೆಯೇ,

ಉ) ಈ ಸಮೀಕ್ಷಾ ಕಾರ್ಯ ಮುಕ್ತಾಯವಾಗುವುದು ಯಾವಾಗ?

ಶ್ರೀ ಹೆಚ್ ಡಿ ಕುಮಾರ ಸ್ವಾಮಿ (ಮುಖ್ಯಮಂತ್ರಿಯವರು)

ಅ) ಹೊಸದಾಗಿ ಸೇರ್ಪಡೆಗೊಂಡಿರುವ 5 ವಲಯಗಳಲ್ಲಿ ಸ್ವತ್ತುಗಳ ಸಮೀಕ್ಷಾ ಕಾರ್ಯಕ್ಕೆ ಚಾಲನೆ ನೀಡಲಾಗಿದ್ದು, ಗುಣಾತ್ಮಕ ಸಮೀಕ್ಷಾ ಕಾರ್ಯಕ್ಕೆ ನುರಿತ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲು ಪ್ರಕ್ರಿಯೆ ನಡೆಯುತ್ತಿದೆ

ಆ) ಹೊಸ 5 ವಲಯಗಳಲ್ಲಿರುವ ಎಲ್ಲಾ ಸ್ವತ್ತುಗಳನ್ನು ಸರ್ವೆ ಮಾಡಿ, ದಾಖಲೆಗಳನ್ನು ತಯಾರಿಸುವುದುದಲ್ಲದೇ, ನ್ಯಾಯಯುತವಾದ ಆಸ್ತಿ ತೆರಿಗೆ ನಿರ್ಧಾರಣೆಗೆ ಒಳಪಡಿಸುವುದು ಹಾಗೂ ಸರ್ಕಾರಿ ಜಾಗಗಳನ್ನು ಸಂರಕ್ಷಿಸುವಲ್ಲಿ ಕ್ರಮ ತೆಗೆದುಕೊಳ್ಳುವುದು ಇದರ ಮೂಲ ಉದ್ದೇಶವಾಗಿದೆ

ಇ) ಪ್ರಸ್ತುತ ಹೊಸದಾಗಿ ಸೇರ್ಪಡೆಯಾಗಿರುವ 5 ವಲಯಗಳಲ್ಲಿ ಸುಮಾರು 6 ಲಕ್ಷ ಆಸ್ತಿಗಳಿರುವುದಾಗಿ ಅಂದಾಜಿಸಲಾಗಿದ್ದು, ಎಲ್ಲಾ ಸ್ವತ್ತುಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸಿದಲ್ಲಿ ಪಾಲಿಕೆಗೆ ಹೆಚ್ಚಿನ ಆದಾಯ ಬರಬಹುದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಆದಾಯದ ಅಂದಾಜನ್ನು ತಯಾರು ಮಾಡುತ್ತಿದೆ

ಈ) ಸ್ವತ್ತುಗಳ ಸಮೀಕ್ಷಾ ಕಾರ್ಯವನ್ನು ನಿರ್ವಹಿಸಲು ಆಯಾ ವಲಯದ ಜಂಟಿ ಆಯುಕ್ತರುಗಳಿಗೆ ವಹಿಸಲಾಗಿದೆ

ಉ) 2007ನೇ ಜೂನ್ 30ರ ಒಳಗಾಗಿ ಸಮೀಕ್ಷಾ ಕಾರ್ಯವನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ